ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5863
ಸದಸ್ಯರ ಹೆಸರು : ಶ್ರೀ ಹಾಲಪ್ಪ ಹೆಚ್. (ಹೊಸನಗರ)
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
1	ತೀರ್ಥಹಳ್ಳಿ ತಾಲೂಕು ಪುರ ಪಂಚಾಯಿತಿ ವ್ಯಾಪ್ತಿಯ ಸೀಬಿನಕೆರೆ ಲೇಔಟ್ ಸರ್ವೇ ನಂ. 96ರ ಯಡೆಹಳ್ಳಿ ಗ್ರಾಮದ ಪುರ ಸಭಾ ವ್ಯಾಪ್ತಿಗೆ ಒಳಪಟ್ಟ ರಸ್ತೆಗಳು ಅನಧಿಕೃತ ಒತ್ತುವರಿಯಾಗಿದೆಯೇ?	ಹೌದು.
2	ಹಾಗಿದ್ದಲ್ಲಿ, ಪುರಪಂಚಾಯಿತಿ ತೆಗೆದುಕೊಂಡ ಕ್ರಮಗಳೇನು	ಪುರಪಂಚಾಯಿತಿಯು ಇಂತಹ ಅನಧಿಕೃತ ಒತ್ತುವರಿಯನ್ನು ತಡೆಗಟ್ಟಿದೆ.
3	ಸೀಬಿನಕೆರೆ ಗುಡ್ಡ ನಿವೇಶನ ಸಂಖ್ಯೆ : 50ರಿಂದ 63ರವರೆಗೆ ಸಂಬಂಧಪಟ್ಟ ನಿವೇಶನಗಳ ವಿನ್ಯಾಸದ ಪ್ರತಿ ಒದಗಿಸುವುದು?	ಮಾನ್ಯ ಸದಸ್ಯರಿಗೆ ನಕ್ಷೆಯ ಪ್ರತಿ ಒದಗಿಸಿದೆ.



ಶ್ರೀ ಹೆಚ್.ಹಾಲಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅದರಲ್ಲಿ ಕ್ರಮ ಸಂಖ್ಯೆ 3ರಲ್ಲಿ ಮಾನ್ಯ ಸದಸ್ಯರಿಗೆ ನಕ್ಷೆಯ ಪ್ರತಿಯನ್ನು ಒದಗಿಸಿದೆ ಎಂದು ಹೇಳಿ ಒದಗಿಸಿದ್ದಾರೆ. ಆದರೆ ಅದೇ ಪ್ರಶ್ನೆಯನ್ನು ಸಂಬಂಧಪಟ್ಟ ಆ ಪುರ ಪಂಚಾಯಿತಿಯಲ್ಲಿ ಕೇಳಿದರೆ ಅವರೊಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಬಗ್ಗೆ ಪರಿಶೀಲಿಸಲಾಗಿ ಕಚೇರಿಯಲ್ಲಿ ಲಭ್ಯವಿರುವುದಿಲ್ಲ ಎಂದು ಹೇಳಿದ್ದಾರೆ. ಅಲ್ಲಿ ಲಭ್ಯ ಇಲ್ಲದಿದ್ದರೆ ಇಲ್ಲಿಗೆ ಹೇಗೆ ಬಂತು? ವಿಧಾನಸೌಧದಲ್ಲಿ ಬೆಂಗಳೂರು ರಾಜ್ಯಮಟ್ಟದ ಆಫೀಸಿನಲ್ಲೇನಾದರೂ ಇರುತ್ತಾ? ಆ ದಾಖಲಾತಿಗಳು. ದಯವಿಟ್ಟು ಅದಕ್ಕೆ ಉತ್ತರವನ್ನು ಹೇಳಬೇಕು ಮತ್ತು ಆ ಅಧಿಕಾರಿ ಇಲ್ಲಿ ತಾವು ಉತ್ತರವನ್ನು ಒದಗಿಸಿದ್ದೀರಿ. ಸಂಬಂಧಪಟ್ಟ ನಕ್ಷೆಯನ್ನು ಅಲ್ಲಿ ಹಿಂಬರಹವನ್ನು ಕೊಟ್ಟು ಹೇಳಿದ್ದಾರೆ. ಇಂಥ ಯಾವುದೇ ದಾಖಲಾತಿ ನಮ್ಮ ಕಚೇರಿಯಲ್ಲಿ ಇಲ್ಲ ಎಂದು ಇದರ ಮೇಲೆ ನಾವು ನಂಬಿಕೆಯನ್ನು ಇಡಬೇಕೋ? ನಾವು ಯಾವುದನ್ನು ನಂಬಬೇಕು? ಇದು ಹೇಗೆ ಬರುತ್ತದೆ?

ಶ್ರೀ ಎಸ್.ಆರ್.ಮೋರೆ: ಮಾನ್ಯ ಉಪಾಧ್ಯಕ್ಷರೇ, ನಾವು ಸದನದಲ್ಲಿ ಏನು ಕೊಟ್ಟಿರುತ್ತೇವೆಲ್ಲ, ಅದನ್ನು ನಂಬಬೇಕಾಗುತ್ತದೆ, ಏಕೆಂದರೆ, ಈ ನಕ್ಷೆಯನ್ನು ನೀವೇನು ಕೇಳಿದ್ದೀರಿ, ಅದನ್ನು ಡೆಪ್ಯುಟಿ ಕಮೀಷನರ್‌ರವರಿಂದ ತರಿಸಿ ನಿಮಗೆ ಒದಗಿಸಲಾಗಿದೆ ಮತ್ತು ಇದು ಸೀಬಿನಕೆರೆ ಒಳಗೆ 1974 ನೇ ಇಸವಿಗೆ ನಿವೇಶನ ರಹಿತರಿಗೆ ಆ ಸೈಟುಗಳನ್ನು ಮಾಡಿರುವುದು. ಸುಮಾರು ಆರು ಎಕರೆ, ಅಲ್ಲಿ ಒಬ್ಬರು ಚಂದ್ರಶೇಖರ್ ಎನ್ನುವವರಿಗೆ ಕೂಡ ಸೈಟ್ ನಂ.59 ಅಲಾಟ್ ಆಗಿತ್ತು. ತಾವು ಹೇಳಿದ ಹಾಗೆ ಅವರು ಒತ್ತುವರಿಯನ್ನು ಮಾಡಿದ್ದಾರೆ. ಆ ಒತ್ತುವರಿಯನ್ನು ಮಾಡಿದ ಮೇಲೆ ತಕ್ಷಣ ಚಂದ್ರಶೇಖರ್‌ರವರು ಒತ್ತುವರಿ ಮಾಡಿದ್ದಾರೆ. ಆ ಟೌನ್ ಪಂಚಾಯಿತಿಯವರು ಕೂಡಲೇ ಹೋಗಿ ಅದನ್ನು ನಿಲ್ಲಿಸಿದ್ದಾರೆ. ಈಗ ಯಾವ ಒತ್ತುವರಿಯೂ ಇಲ್ಲ. ಆ ಜಾಗ ಈ ನಮ್ಮ ಟೌನ್ ಪಂಚಾಯತ್ ಕಬ್ಜಾದಲ್ಲೇ ಇದೆ.

ಶ್ರೀ ಹೆಚ್.ಹಾಲಪ್ಪ: ಮಾನ್ಯ ಉಪಾಧ್ಯಕ್ಷರೇ, ಆ ದಾಖಲಾತಿಗಳನ್ನು ತಾವು ನಮಗೆ ಒದಗಿಸಿದ್ದೀರಿ, ಇದರಲ್ಲಿ ಆ ಪುರಸಭಾ ಅಧಿಕಾರಿ ಒದಗಿಸಿದ್ದನ್ನು ನಂಬ ಬೇಕೋ, ತಾವು ಒದಗಿಸಿರುವುದನ್ನು ನಂಬುತ್ತೇವೆ. ಏಕೆಂದರೆ ನಮ್ಮದು ವಿಧಾನಸಭೆ. ತಾವು ಹೇಳಿದ ಮೇಲೆ ಇದು ಸರ್ವೋಚ್ಚ. ಅದನ್ನು ಒಪ್ಪುತ್ತೇವೆ. ಮತ್ತು ಈ ಅಧಿಕಾರಿ ಸುಳ್ಳು ಕೊಟ್ಟಿದ್ದಾರಲ್ಲಾ ಇವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ದಯವಿಟ್ಟು ಹೇಳಿ ಸ್ವಾಮಿ.

ಶ್ರೀ ಎಸ್.ಆರ್.ಮೋರೆ:– ಇದನ್ನು ತಾವು ನನ್ನ ಗಮನಕ್ಕೆ ತಂದಿದ್ದೀರಿ. ಇದರ ಬಗ್ಗೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ಎನ್.ಜೀವರಾಜ್:– ಮಾನ್ಯ ಉಪಾಧ್ಯಕ್ಷರೆ, ಇಂಥ ಅಧಿಕಾರಿಗಳ ಮೇಲೆ ತಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡು ಅವರನ್ನು ಸಸ್ಪೆಂಡ್ ಮಾಡಬೇಕು. ಏಕೆಂದರೆ, ಒಬ್ಬ ಶಾಸಕರು ಕೇಳಿದ್ದಕ್ಕೆ ಈ ರೀತಿ ದಾಖಲೆಗಳು ಸಿಗುವುದಿಲ್ಲವೆಂದು ಉತ್ತರ ಕೊಡುತ್ತಾರೆಂದರೆ ಇದರ ಹಿಂದಿರುವ ಉದ್ದೇಶವೇನು? ಇದರಲ್ಲಿ ಬಹಳಷ್ಟು ಭ್ರಷ್ಟಾಚಾರ ನಡೆದಿದೆ ಎಂದು ನಾನು ನೇರವಾಗಿ ಆರೋಪವನ್ನು ಮಾಡುತ್ತೇನೆ. ಇದು ನನ್ನ ಪಕ್ಕದ ಕ್ಷೇತ್ರ ಕೂಡ ಹೌದು.

ಶ್ರೀ ಅರಗ ಜ್ಞಾನೇಂದ್ರ:– ಮಾನ್ಯ ಉಪಾಧ್ಯಕ್ಷರೇ, ತೀರ್ಥಹಳ್ಳಿ ನನ್ನ ಕ್ಷೇತ್ರ, ಏನು ಗಡಿಬಿಡಿಯಾಗಿದೆ ಎಂದರೆ ನಮ್ಮ ಮುಖ್ಯ ಅಧಿಕಾರಿ ಯಾರಿದ್ದಾರೆ. ಅವರ ಊರು ರಾಣೆಬೆನ್ನೂರು. ಅವರು ಶುಕ್ರವಾರದ ದಿವಸ ಹೊರಟು ಹೋಗುತ್ತಾರೆ. ಮಂಗಳವಾರದ ದಿವಸ ಬರುತ್ತಾರೆ. ಮೂರು ದಿವಸ ಇರುತ್ತಾರೆ. ಹನಿಮೂನ್‌ಗೆ ತೀರ್ಥಹಳ್ಳಿಗೆ ಬಂದಂಗೆ ಬರುತ್ತಾರೆ. ಯಾರಾದರೂ ಹೋಗಿ ಕೇಳಿದರೆ ದಾಖಲಾತಿ ಸರಿಯಾಗಿ ಕೊಡುವುದಿಲ್ಲ ಮತ್ತು ಅವರಿಗೇನೂ ಸಹ ಗೊತ್ತಿರುವುದಿಲ್ಲ ಕಚೇರಿ ಬಗ್ಗೆ. ಅಲ್ಲಿ ಕಚೇರಿಯ ಹಿಡಿತ ಕೂಡ ಇಲ್ಲ. ನಾನು ಇಲ್ಲಿ ಬಂದು ಹೇಳಿದ್ದೇನೆ. ಅಲ್ಲಿ ಒಬ್ಬರು ಅಧ್ಯಕ್ಷರು ಅತ್ಯಂತ ಒಳ್ಳೆಯ ಅಧ್ಯಕ್ಷರಿದ್ದಾರೆ. ದಕ್ಷ ಅಧ್ಯಕ್ಷರು ಒಬ್ಬ ವೈದ್ಯಾಧಿಕಾರಿಯನ್ನೇ ನಾವು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಅವರಿಗೆ ಬಹಳ ಕನಸುಗಳಿದ್ದಾವೆ. ಆದರೆ ಈ ಚೀಪ್ ಆಫೀಸರ್‌ನಿಂದಾಗಿ ಎಲ್ಲಾ ಅಭಿವೃದ್ಧಿ ಕೆಲಸಗಳು ಸ್ಥಗಿತವಾಗಿವೆ. ಅವರನ್ನು ಎಲ್ಲಾದರೂ ಟ್ರಾನ್ಸ್‌ಫರ್ ಮಾಡಿ. ಅವರನ್ನು ಆ ಫಲಾನುಭವಿ ಹೋಗಿ ಕೇಳಿದಾಗ ಲಭ್ಯ ಇರುವುದಿಲ್ಲವೆಂದು ಹೇಳಿ ಕೊಟ್ಟಿದ್ದಾನೆ. ಶಾಸಕರು ಪ್ರಶ್ನೆಯನ್ನು ಕೇಳಿದಾಗ ನೀವು ಉತ್ತರವನ್ನು ಒದಗಿಸುತ್ತೀರಿ, ಸ್ಕೆಚ್ ಅವನ್ನು ಒದಗಿಸುತ್ತೀರಿ ಮತ್ತು ಎಲ್ಲವೂ ಕೂಡ ಇದೆ ಎಂದು ಹೇಳಿ ಒದಗಿಸುತ್ತೀರಿ. ಅಂದರೆ ಎಲ್ಲರೂ ಬಂದು ಶಾಸಕರ ಮೂಲಕ ಪ್ರಶ್ನೆ ಕೇಳಿ ಅವರು ದಾಖಲಾತಿಗಳನ್ನು ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಮುಖ್ಯ ಅಧಿಕಾರಿ ಅಲ್ಲಿ ಮಾಡಬೇಕು ಸಾರ್. ಅಧಿಕಾರಿ ವಿಕೇಂದ್ರೀಕರಣ ಅಂದರೇನು? ಇದನ್ನು ದಯವಿಟ್ಟು ಮುಖ್ಯಾಧಿಕಾರಿ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಕೂಡ ವಿನಂತಿ ಮಾಡಿಕೊಳ್ಳುತ್ತೇನೆ. ಆ ಕ್ಷೇತ್ರದ ಶಾಸಕನಾಗಿ ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಸ್.ಆರ್.ಮೋರೆ:– ಅಲ್ಲಿ ಚೀಪ್ ಆಫೀಸರ್ ಬೇಜವಾಬ್ದಾರಿಯಿಂದ ಉತ್ತರವನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾವು ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತದೆ.